A.—Smt. GRACE TUCKER (Deputy Minister for Education).—

(*a*) Yes.

(*b*) Yes.

(*c*) Permissible in Bombay and Madras Regions, but not in other areas of the State.

(*d*) There is no provision in the Provident Fund Rules of those areas.

Smt. GRACE TUCKER.—Sir, there is some correction to (*a*). This is applicable to Government Servants of Coorg and Ex-Mysore an d not Hyderabad area of 1957.

Sri P. F. D'MELLOW.—May I know when this Triple Benefit Scheme will come into force in respect of Aided School teachers ?

Smt. GRACE TUCKER.—The triple Benefit Scheme will come into force after 1st April and will certainly have their own rules which will be followed.

The Prescribed qualifications of Teachers to teach Hindi or Sanskrit in Hindi vidwat course.

* *Q.*—181. Sri T. S. SIVANNA (Madhugiri).—

Will the Government be pleased to state :-

(*a*) the prescribed qualifications of teachers to teach Hindi or Sanskrit in Hindi Vidwat Course ;

(*b*) whether there are any under-qualified teachers to teach Hindi or Sanskrit in Hindi Vidwat Course ;

(*c*) whether Government have received any complaints in this connection ;

(*d*) if so, the action taken by the Government thereon ?

A.—Sri S. R. KANTHI (Minister for Education).—

(*a*) The following are the qualifications prescribed for the teachers of High Schools/Training Institutions:—

(i) S. S. L. C. and

(ii) Rashtra Bhasha Visharada Degree of the Dakshina Bharath Hindi Prachara Sabha, Madras,

or

" Visharada " of Sahitya Sammelan, Allahabad,

or

" Kovid " of Kashi Vidyapeetha,

or

" Hindi Vidwan " of Madras University,

or

"Hindi Rathna" Examination of Mysore Hindi Prachar Parishat, Mysore,

or

"Hindi Vidwan" of Mysore, conducted by the Department of Education,

or

Any other equivalent recognised Hindi qualifications.

The qualification prescribed for Sanskrit Teacher of High Schools/Training Institutions are :—

"Vidwan Uttama" Examination in Sanskrit conducted by the Education Department.

(*b*) No.

(*c*) Yes.

(*d*) Report has been called for the Deputy Director of Public Instruction, Mysore.

ಶ್ರೀ ಟಿ. ಎಸ್. ಶಿವಣ್ಣ.—(ಬ) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಹಾಗಾದರೆ ತಮ್ಮ ಗಮನಕ್ಕೆ unqualified Teachers ಗಳನ್ನು ನೇಮಕ ಮಾಡಿರುವುದು ಬಂದಿಲ್ಲವೇ ?

† ಶ್ರೀ ಎಸ್. ಆರ್. ಕಂಠಿ.—ದಕ್ಷತೆ ಅನುಭವವಿಲ್ಲ ಎಂದು ಹೇಳುತ್ತಿಲ್ಲ. ಇದುವರೆಗೂ ಯಾವ ತರಹದ ದೂರುಗಳು ಬಂದಿಲ್ಲ. ಆದರೆ ಕೆಲವರ ವಿಚಾರವಾಗಿ ಎಂದರೆ ಒಬ್ಬರು ಶ್ರೀ ಎ. ಟಿ. ಶ್ರೀನಿವಾಸ ರಾಘವಾಚಾರಿ ಮತ್ತು ಇನ್ನೊಬ್ಬರು ಬಿ. ಎಸ್. ಲಕ್ಷ್ಮೀನರಸಿಂಹಯ್ಯ ಇವರಿಬ್ಬರ ಮೇಲೆ ಸರಕಾರದವರು ಯಾವ ರೀತಿ ಮಾಡಬೇಕೆಂದು ಯೋಚನೆ ಮಾಡುತ್ತಿದ್ದಾರೆ. ಇದರಲ್ಲಿ ಶ್ರೀ ಬಿ. ಎಸ್. ಲಕ್ಷ್ಮೀನರಸಿಂಹಯ್ಯ ಎನ್ನುವವರು B. A. with Hindi qualification ಉಳ್ಳವರು. ಇನ್ನೊಬ್ಬರು ಶ್ರೀ ಎ. ಟಿ. ಶ್ರೀನಿವಾಸ ರಾಘವಾಚಾರಿಯವರು ರಾಷ್ಟ್ರಭಾಷಾ ವಿಶಾರದ ಪರೀಕ್ಷೆ ಪಾಸು ಮಾಡಿದ್ದಾರೆ. ಇವರಿಗೆ ಎಕ್ಸ್‌ಪೀರಿಯನ್ಸು ಇದೆ ಮತ್ತು ದೊಡ್ಡ ಪಂಡಿತರು ಎಂದು ತಿಳಿದು ಇವರಿಬ್ಬರನ್ನೂ ನೇಮಿಸಿತ್ತು. ಈಗ ಇವರ ಮೇಲೆ ಕಂಪ್ಲೇಂಟುಗಳು ಬಂದಿರುವುದರಿಂದ ಏನು ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಮಾನ್ಯ ಮಂತ್ರಿಗಳು ಈಗ ತಾನೇ ಹೇಳಿದ ಇಬ್ಬರು ಉಪಾಧ್ಯಾಯರುಗಳಿಗಿಂತ ಆ ಶಾಲೆಯಲ್ಲಿರುವ ವಿದ್ಯಾರ್ಥಿಗಳಿಗೇ ಇವರಿಗಿಂತ ಹೆಚ್ಚಿನ ಕ್ವಾಲಿಫಿಕೇಷನ್ನು ಇರುವುದರಿಂದ ಆ ಶಾಲೆಯಿಲ್ಲಿ ಇವರು ಪಾಠ ಹೇಳುವುದು ಸರಿಯಲ್ಲ ಎನ್ನುವುದು ಸರಕಾರದ ಗಮನಕ್ಕೆ ಬಂದಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಇದರಲ್ಲಿ ಅಲ್ಲಿ ಇರುವವರಿಗೇ ಹೆಚ್ಚು ಕ್ವಾಲಿಫಿಕೇಷನ್ನು ಇರಬಹುದು. ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಆ ವಿಚಾರ ನಮಗೆ ಗೊತ್ತಿಲ್ಲ. ಎ. ಟಿ. ಶ್ರೀನಿವಾಸ ರಾಘವಾಚಾರ್ ಎನ್ನುವವರು 12-7-50 ರಿಂದ ಇಲ್ಲಿ ಕೆಲಸ ಮಾಡುತ್ತಿದ್ದಾರೆ. ಮತ್ತೆ ಬಿ. ಎಸ್. ಲಕ್ಷ್ಮೀನರಸಿಂಹಯ್ಯ ಎನ್ನುವವರು 17-1-49 ರಿಂದ ಕೆಲಸ ಮಾಡುತ್ತಿದ್ದಾರೆ. ಇವರಿಬ್ಬರಿಗೂ ಒಳ್ಳೆಯ ಅನುಭವವೂ ಇದೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಈ ಶಾಲೆಯ ಬಗ್ಗೆ ಸ್ವಳದಲ್ಲಿರುವವರು ಹಿಂದೆ ದೂರು ಕೊಟ್ಟಾಗ ಇಲಾಖೆಯ ಅಧಿಕಾರಿಗಳು ಅವರ ವಿಚಾರದಲ್ಲಿ ತನಿಖೆ ನಡೆಸಿ, ಬಹಳ ದೊಡ್ಡದಾದ ಸಂಗತಿಗಳು ಇಲ್ಲಿ ನಡೆಯುತ್ತಿವೆ ಎಂದು ವರದಿ ಮಾಡಿರುವುದು ಸರಕಾರಕ್ಕೆ ಗೊತ್ತಾಗಲಿಲ್ಲವೇ ?

ಶ್ರೀ ಎಸ್. ಆರ್. ಕಂಠಿ.—ಇಲ್ಲ. ಈಗ ಇನ್‌ಫರ್‌ಮೇಷನ್ನು ಕೊಡುತ್ತಿದ್ದಾರೆ, ವಿಚಾರಿಸುತ್ತೇನೆ.

---

† Indicates that the remarks or speeches have not been revised by the member concerned

ಶ್ರೀ ಟಿ. ಎನ್. ಮಾದಪ್ಪಗೌಡ.—ಡಿಪಾರ್ಟುಮೆಂಟುಗಳಲ್ಲಿ ಪರೀಕ್ಷೆಗಳನ್ನು ನಡೆಸುವಂತೆ ಇಲ್ಲಿಯೂ ಏರ್ಪಾಡು ಮಾಡುವುದಕ್ಕೆ ಇನ್ನು ಮುಂದಾದರೂ ಸರಕಾರದವರು ಯೋಚನೆ ಮಾಡುತ್ತಾರೆಯೆ ?

ಶ್ರೀ ಎಸ್. ಆರ್. ಕಂಠಿ.—ಯೋಚನೆ ಮಾಡಿನೋಡೋಣ.

ಶ್ರೀ ಎಚ್. ಆರ್. ಕೇಶವಮೂರ್ತಿ.—Underqualified Teachers ತೆಗೆದು ಕೊಳ್ಳುವುದಕ್ಕೆ ಬದಲು Requisite qualifications ಇರುವವರನ್ನು ತೆಗೆದುಕೊಳ್ಳಲು ಏನು ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೀರಿ ?

ಶ್ರೀ ಎಸ್. ಆರ್. ಕಂಠಿ.—ನಾನೀಗಾಗಲೇ ಹೇಳಿದೆ, ಇವರಿಬ್ಬರು ಪಂಡಿತರು, ಅನುಭವವುಳ್ಳವರು ಮತ್ತು ೧೫ವರ್ಷಗಳಿಂದ ಕೆಲಸ ಮಾಡುತ್ತಿರುವುದರಿಂದ ಇವರನ್ನು Under qualified ಎಂದು ಹೇಳುವುದಕ್ಕಾಗುವುದಿಲ್ಲ. ಇವರಲ್ಲಿ ಶ್ರೀ ಎ. ಟಿ. ಶ್ರೀನಿವಾಸ ರಾಘವಾಚಾರ್ ಎನ್ನುವವರು ಹಿಂದೀ ರಾಷ್ಟ್ರಭಾಷಾ ವಿಶಾರದ ಪರೀಕ್ಷೆಯನ್ನು ಪಾಸು ಮಾಡಿರುವುದರಿಂದ ಇವರನ್ನು Un-qualified ಎಂದು ಹೇಳುವುದು ಬಹಳ ಕಷ್ಟ. ಅಲ್ಲದೆ ಇವರು ಅನುಭವನ್ವಿತರಾದ ಕನ್ನಡ ಪಂಡಿತರೂ, ಹಿಂದಿ ಪಂಡಿತರೂ ಆದವರು.

Starting of an Industrial Estate at Gauribidanur.

*Q.—372. **Sri R. N. LAKSHMIPATHI** (Gauribidanur).—

Will the Government be pleased to state :—

(*a*) when the proposal to start an Industrial Estate at Gauribidanur was dropped ;

(*b*) the reasons therefor ?

A.—**Sri K. MALLAPPA.** (Minister for Industries and Commerce).—

(*a*) In September 1962.

(*b*) On account of re-assessment of felt needs.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಗೌರಿಬಿದನೂರಿನಲ್ಲಿ ಇಂಡಸ್ಟ್ರಿಯಲ್ ಎಸ್ಟೇಟು ಸ್ಥಾಪನೆ ಮಾಡಬೇಕು, ಎಂದು ಅಲ್ಲಿ ಸ್ಥಳವನ್ನು ಸರಕಾರ ಗೊತ್ತು ಮಾಡಿರಲಿಲ್ಲವೇ ?

† ಶ್ರೀ ಕೆ. ಮಲ್ಲಪ್ಪ.—ಗೌರಿಬಿದನೂರಿನಲ್ಲಿ ಮೊದಲಿಗೆ ಇಂಡಸ್ಟ್ರಿಯಲ್ ಎಸ್ಟೇಟನ್ನು ಸ್ಥಾಪನೆ ಮಾಡಬೇಕೆಂದು ಸ್ಥಳವನ್ನು ನೋಡಲಾಗಿತ್ತು. ಆದರಂತೆ ಹಿಂದೆ ನಿಶ್ಚಯವೂ ಆಗಿತ್ತು. ಆದರೆ ಈ ಅಸೆಂಬ್ಲಿಯಲ್ಲಿ ಮೊದಲೇ ತಿಳಿಸಿದ್ದಂತೆ ಗೌರಿಬಿದನೂರಿಗೆ ಸಕ್ಕರೆ ಕಾರ್ಖಾನೆ ಬಂದಿದೆ. ಆದುದರಿಂದ ಈಗ ಇಂಡಸ್ಟ್ರಿಯಲ್ ಎಸ್ಟೇಟನ್ನು ಚಿಕ್ಕಬಳ್ಳಾಪುರದಲ್ಲಿ ಮಾಡಬೇಕೆಂದು ಯೋಚನೆ ಮಾಡಲಾಗಿದೆ. ಅಲ್ಲದೆ ಗೌರಿಬಿದನೂರಿನಲ್ಲಿ ಒಂದು ಒಳ್ಳೆಯ ಇಂಡಸ್ಟ್ರಿಯಲ್ ವರ್ಕ್‌ಷಾಪನ್ನು ಸ್ಥಾಪನೆ ಮಾಡಿ ಅಲ್ಲಿ Agricultural implements, Agricultural pumps, Motors ವಗೈರೆಗಳನ್ನು ಮಾಡುವಂತೆ ವರ್ಕ್‌ಷಾಪ್ ಮಾಡಿ ಟ್ರೇನಿಂಗ್ ಫೆಸಿಲಿಟೀಸ್‌ಗಳನ್ನು ಏರ್ಪಾಡು ಮಾಡಿದರೆ ಬಹಳ ಚೆನ್ನಾಗಿರುತ್ತದೆ ಎಂದು ಅದಕ್ಕೆ ತಕ್ಕಂತೆ ಒಂದು ಬಿಲ್ಡಿಂಗನ್ನೂ ನೋಡಿದ್ದೇವೆ. Immediately such a workshop will be started there. So, in view of this, the Government have changed the decision and they have now decided to shift the Industrial Estate to Chickballapur.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಬೆಂಗಳೂರಿನಲ್ಲಿ ಮಾತ್ರ ಅನೇಕ ದೊಡ್ಡ ಕೈಗಾರಿಕೆಗಳಿದ್ದರೂ ಇಂಡಸ್ಟ್ರಿಯಲ್ ಎಸ್ಟೇಟು ಇದೆ. ಗೌರಿಬಿದನೂರಿನಲ್ಲಿ ಸಕ್ಕರೆ ಕಾರ್ಖಾನೆ ಇದೆ ಎಂದು ಇಲ್ಲಿದ್ದ ಇಂಡಸ್ಟ್ರಿಯಲ್ ಎಸ್ಟೇಟನ್ನೂ ಚಿಕ್ಕಬಳ್ಳಾಪುರಕ್ಕೆ ಬದಲಾಯಿಸಲು ಅವಶ್ಯಕತೆ ಏನಿತ್ತು ?